# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

## <u>ದ್ವಿತೀಯ/ ತೃತೀಯ ಹಾಗೂ ನಾಲ್ಕನೇ ಅಂಕಪಟ್ಟಿ ಪ್ರತಿಯನ್ನು ಪಡೆಯಲು ಮಾರ್ಗಸೂಚಿ</u>

## <u>Guidelines to obtain DPC/TPC & Fourth copy</u>

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಕಾರಣಾಂತರಗಳಿಂದ ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿಗಳೇನಾದರೂ ಕಳೆದು ಕೊಂಡಿದ್ದಲ್ಲಿ ಅಂತಹ ಅಭ್ಯರ್ಥಿಗಳು ದ್ವಿತೀಯ, ತೃತೀಯ ಮತ್ತು ನಾಲ್ಕನೇ ಅಂಕಪಟ್ಟಿ ಪಡೆಯಲು ಹಾಗೂ ಅನುತ್ತೀರ್ಣರಾದ ವಿದ್ಯಾರ್ಥಿಗಳು ಅಂಕಪಟ್ಟಿಯನ್ನು ಪಡೆಯಲು ದಿನಾಂಕ: 16–12–2020 ರಿಂದ ಜಾರಿಗೆ ಬರುವಂತೆ, Online ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

1. ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿಯನ್ನು ಕಳೆದುಕೊಂಡ ಅಭ್ಯರ್ಥಿಯು ದ್ವಿತೀಯ, ತೃತೀಯ ಮತ್ತು ನಾಲ್ಕನೇ ಅಂಕಪಟ್ಟಿಗಾಗಿ ಕೋರಿಕೆ ಅರ್ಜಿಯನ್ನು ಮಂಡಳಿ ವೆಬ್‌ಸೈಟ್ www.sslc.karanataka.gov.in ರಲ್ಲಿ ಅರ್ಜಿಯನ್ನು Online services ಕಲಂರಲ್ಲಿ ಅಳವಡಿಸಲಾಗಿದ್ದು, download ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

2. ಅಭ್ಯರ್ಥಿಯು ಕೋರಿಕೆ ಅರ್ಜಿಯನ್ನು ನಿಖರವಾಗಿ ಭರ್ತಿ ಮಾಡಿ ತನ್ನ ಸಹಿಯನ್ನು ಹಾಕಿ ಅಫಿಡೆವಿಟ್ ಮತ್ತು ಅಭ್ಯರ್ಥಿಯ ಆಧಾರ್ ಪ್ರತಿಯನ್ನು ಹಾಗೂ ಲಭ್ಯವಿದ್ದಲ್ಲಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಪ್ರತಿಯನ್ನು ಸಹ Upload ಮಾಡುವುದು. ಅಭ್ಯರ್ಥಿಯು ಶಾಲೆಗೆ ಹೋಗುವ ಅಗತ್ಯವಿರುವುದಿಲ್ಲ.

3. ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ ಕಳೆದು ಹೋದ ಬಗ್ಗೆ ರೂ.20/–ಗಳ ಛಾಪಾ ಕಾಗದ ಪಡೆದು ಇ–ಸ್ಟಾಂಪ್ ಮೂಲಕ First party ಅಭ್ಯರ್ಥಿ ಹೆಸರಿನಲ್ಲಿ Second party ಕೆ.ಎಸ್.ಇ.ಇ.ಬಿ ಹೆಸರಿನಲ್ಲಿ ಖರೀದಿಸಿ, ನ್ಯಾಯಾಲಯ / ನೋಟರಿಯವರಿಂದ ಅಫಿಡೆವಿಟ್ ಪಡೆದು, ಸದರಿ ಅಫಿಡೆವಿಟ್‌ರಲ್ಲಿ ಯಾವ ಕಾರಣದಿಂದ ಕಳೆದು ಹೋಗಿದೆ ಎಂದು ಸ್ಪಷ್ಟಪಡಿಸಿರಬೇಕು. ವ್ಯಾಸಂಗ ಮಾಡಿದ ಶಾಲೆಯ ವಿಳಾಸವನ್ನು ಕಡ್ಡಾಯವಾಗಿ ಸ್ಪಷ್ಟಪಡಿಸಿರಬೇಕು. ಒಂದು ವೇಳೆ ಕಳೆದು ಹೋದ ಮೂಲ ಎಸ್.ಎಸ್.ಎಲ್.ಸಿ / ದ್ವಿತೀಯ / ತೃತೀಯ ಅಂಕಪಟ್ಟಿ ಸಿಕ್ಕಿದಲ್ಲಿ ಅದನ್ನು ಮಂಡಳಿಗೆ ಕಡ್ಡಾಯವಾಗಿ ಹಿಂದಿರುಗಿಸುತ್ತೇನೆ ಎಂದು ಪ್ರಮಾಣೀಕರಿಸಬೇಕು.

4. ಅಭ್ಯರ್ಥಿಯು ಅಪ್ರಾಪ್ತ ವಯಸ್ಕನಾಗಿದ್ದಲ್ಲಿ ಮಾತ್ರ ಪೋಷಕರ ಹೆಸರಿನಲ್ಲಿ ಕ್ರಮಸಂಖ್ಯೆ–3 ರಲ್ಲಿ ತಿಳಿಸಿದಂತೆ ಅಫಿಡವಿಟ್ ಪಡೆಯಬೇಕು.

5. ಅಭ್ಯರ್ಥಿಯು ಅರ್ಜಿಯಲ್ಲಿ ಸಹಿ ಮಾಡಿದಂತೆ ಅಫಿಡೆವಿಟ್‌ನಲ್ಲಿಯೂ ಸಹಿ ಮಾಡಬೇಕು. ಅರ್ಜಿಯಲ್ಲಿಯೇ ಒಂದು ರೀತಿ ಅಫಿಡೆವಿಟ್‌ನಲ್ಲಿಯೇ ಒಂದು ರೀತಿ ಸಹಿ ಇರಕೂಡದು.

6. ಅಭ್ಯರ್ಥಿಯು ಕ್ರ.ಸಂ 2 ರಿಂದ 5 ವರೆಗೆ ತಿಳಿಸಲಾದಂತೆ, Online ಮೂಲಕ ಕೋರಿಕೆ ಅರ್ಜಿ, ಅಫಿಡೆವಿಟ್ ಆಧಾರ್ ಪ್ರತಿ ಹಾಗೂ ಲಭ್ಯವಿದ್ದಲ್ಲಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಪ್ರತಿಯನ್ನು pdf ನಮೂನೆಯಲ್ಲಿ 500kb To 1mb ಅಳತೆಯಲ್ಲಿ ಸ್ಕ್ಯಾನ್ ಮಾಡಿಟ್ಟುಕೊಂಡು Upload ಮಾಡುವುದು.

7. ಅಭ್ಯರ್ಥಿಯು ಕೋರಲಾದ ಸೇವೆಗೆ ಅನುಗುಣವಾಗಿ ಸೇವಾ ಶುಲ್ಕವನ್ನು Online ಮೂಲಕವೇ ಸೃಜಿಸಿಕೊಂಡ ಚಲನ್ (Cash Payment) ಉಪಯೋಗಿಸಿಕೊಂಡು ಬ್ಯಾಂಕ್‌ಮೂಲಕ ಇಲ್ಲವೇ Online ನಲ್ಲಿ (Debit Card, Credit Card & Internet Banking) ಪಾವತಿಸುವುದು.

**ನಿಗದಿತ ಶುಲ್ಕಗಳ ವಿವರ :**

| ಕ್ರ.ಸಂ | ವಿಷಯ | ನಿಗಧಿತ ಶುಲ್ಕ | | ಕಾಲಾವಧಿ (ಸಾರ್ವತ್ರಿಕ ರಜೆ ಹೊರತುಪಡಿಸಿ) | |
|---|---|---|---|---|---|
| | | ಸಾಮಾನ್ಯ | ತುರ್ತು | ಸಾಮಾನ್ಯ | ತುರ್ತು |
| 1 | ದ್ವಿತೀಯ ಅಂಕಟ್ಟಿ | 875/– | 1750/– | 30 – ಕೆಲಸದ ದಿನಗಳು | 05 – ಕೆಲಸದ ದಿನಗಳು |
| 2 | ತೃತೀಯ ಅಂಕಪಟ್ಟಿ | 3500/– | 5250/– | 30 – ಕೆಲಸದ ದಿನಗಳು | 05 – ಕೆಲಸದ ದಿನಗಳು |
| 3 | ನಾಲ್ಕನೇ ಅಂಕಪಟ್ಟಿ | 5250/– | 8750/– | 30 – ಕೆಲಸದ ದಿನಗಳು | 05 – ಕೆಲಸದ ದಿನಗಳು |

## ಅನುತ್ತೀರ್ಣ ಅಂಕಪಟ್ಟಿ ಪ್ರತಿಯನ್ನು ಪಡೆಯಲು ಮಾರ್ಗಸೂಚಿ

## Guidelines to obtain Fail Marks Card

- ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ಅಭ್ಯರ್ಥಿಗಳು ಅನುತ್ತೀರ್ಣ ಅಂಕಪಟ್ಟಿಗಾಗಿ ಕೋರಿಕೆ ಅರ್ಜಿಯನ್ನು ಮಂಡಳಿ ವೆಬ್‌ಸೈಟ್ www.sslc.karanataka.gov.in ರಲ್ಲಿ ಅರ್ಜಿಯನ್ನು Online services ಕಲಂರಲ್ಲಿ ಅಳವಡಿಸಲಾಗಿದ್ದು, download ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

- ಅಭ್ಯರ್ಥಿಯೇ ನೇರವಾಗಿ ಕೋರಿಕೆ ಅರ್ಜಿಯನ್ನು ನಿಖರವಾಗಿ ಭರ್ತಿ ಮಾಡಿ ಅಭ್ಯರ್ಥಿಯು ಸಹಿಯನ್ನು ಹಾಕಿ ಆಧಾರ್ ಪ್ರತಿಯನ್ನು Upload ಮಾಡುವುದು. ಅಭ್ಯರ್ಥಿಯು ಶಾಲೆಗೆ ಹೋಗುವ ಅಗತ್ಯವಿರುವುದಿಲ್ಲ.

- ಅಭ್ಯರ್ಥಿಯು Online ಮೂಲಕ ಕೋರಿಕೆ ಅರ್ಜಿ, ಆಧಾರ್ ಪ್ರತಿಯನ್ನು pdf ನಮೂನೆಯಲ್ಲಿ 500kb to 1mb ಅಳತೆಯಲ್ಲಿ ಸ್ಕ್ಯಾನ್ ಮಾಡಿಟ್ಟುಕೊಂಡು Upload ಮಾಡುವುದು.

- ಅಭ್ಯರ್ಥಿಯು ಕೋರಲಾದ ಸೇವೆಗೆ ಅನುಗುಣವಾಗಿ ಸೇವಾ ಶುಲ್ಕವನ್ನು Onlineನಲ್ಲಿ ಸೃಜಿಸಿಕೊಂಡ ಚಲನ್ (Cash Payment) ಉಪಯೋಗಿಸಿಕೊಂಡು ಬ್ಯಾಂಕ್‌ಮೂಲಕ ಇಲ್ಲವೇ Online ನಲ್ಲಿ (Debit Card, Credit Card & Internet Banking) ಪಾವತಿಸುವುದು.

**ನಿಗದಿತ ಶುಲ್ಕದ ವಿವರ :**

| ಕ್ರ.ಸಂ | ವಿಷಯ | ನಿಗಧಿತ ಶುಲ್ಕ | | ಕಾಲಾವಧಿ (ಸಾರ್ವತ್ರಿಕ ರಜೆ ಹೊರತುಪಡಿಸಿ) | |
|---|---|---|---|---|---|
| | | ಸಾಮಾನ್ಯ | ತುರ್ತು | ಸಾಮಾನ್ಯ | ತುರ್ತು |
| 4 | ಅನುತ್ತೀರ್ಣ ಅಂಕಪಟ್ಟಿ | 350/– | 700/– | 15 ಕೆಲಸದ ದಿನಗಳು | 05 – ಕೆಲಸದ ದಿನಗಳು |

# ಕ್ರೋಢೀಕೃತ ಅಂಕಪಟ್ಟಿ ಪಡೆಯಲು ಮಾರ್ಗಸೂಚಿ

# Guidelines to obtain Consolidated Marks Card

- 1999 ರ ಪೂರ್ವದಲ್ಲಿ ವಿದ್ಯಾರ್ಥಿಗಳು ಪ್ರಯತ್ನದಲ್ಲಿ ಉತ್ತೀರ್ಣರಾಗಿದ್ದು, ಅಂತಹ ವಿದ್ಯಾರ್ಥಿಗಳಿಗೆ ಮಂಡಳಿಯಿಂದ ಚಿಕ್ಕದಾದ (Statement of Marks) ನೀಡಲಾಗಿರುತ್ತದೆ. ಇದರಲ್ಲಿ ಜನ್ಮದಿನಾಂಕ ಮುದ್ರಿತವಾಗಿರುವುದಿಲ್ಲ.
- ಅಂತಹ ಅಭ್ಯರ್ಥಿಗಳು ಕ್ರೋಢೀಕೃತ ಅಂಕಪಟ್ಟಿ ಪಡೆಯಲಿಚ್ಛಿಸಿದಲ್ಲಿ ದ್ವಿತೀಯ ಅಂಕಪಟ್ಟಿ ಪಡೆಯಲು ನೀಡಿರುವ ಸೂಚನೆಗಳನ್ನೇ ಪಾಲಿಸುವುದು.

**ಅರ್ಜಿದಾರರ ಗಮನಕ್ಕೆ :**

- Online ಮೂಲಕ ಸ್ವೀಕರಿಸಲಾದ ಅರ್ಜಿಗಳನ್ನು ವಿಭಾಗೀಯ ಕಛೇರಿಯಲ್ಲಿ ಪರಿಶೀಲಿಸಿ, ನಿಗಧಿತ ಅವಧಿಯಲ್ಲಿ ಸಿದ್ಧಪಡಿಸಲಾದ ಅಂಕಪಟ್ಟಿಯನ್ನು ಆಧಾರ್ ಪ್ರತಿಯಲ್ಲಿನ ವಿಳಾಸಕ್ಕೆ ರವಾನಿಸಲಾಗುವುದು.

- ಒಂದು ವೇಳೆ ಆಧಾರ್ ಪ್ರತಿಯಲ್ಲಿನ ವಿಳಾಸ ತಪ್ಪಾಗಿದ್ದಲ್ಲಿ, ಸಂಬಂಧಿಸಿದ ಶಾಲಾ ಮುಖ್ಯಶಿಕ್ಷಕರ ಮುಖೇನ ವಿತರಿಸಲು ತಿಳಿಸಲಾಗುವುದು.

**ನಿಗದಿತ ಶುಲ್ಕದ ವಿವರ :**

| ಕ್ರ.ಸಂ | ವಿಷಯ | ನಿಗಧಿತ ಶುಲ್ಕ | | ಕಾಲಾವಧಿ (ಸಾರ್ವತ್ರಿಕ ರಜೆ ಹೊರತುಪಡಿಸಿ) | |
|---|---|---|---|---|---|
| | | ಸಾಮಾನ್ಯ | ತುರ್ತು | ಸಾಮಾನ್ಯ | ತುರ್ತು |
| 5 | ಕ್ರೋಢೀಕೃತ ಅಂಕಪಟ್ಟಿ | 875/- | 1750/- | 30 – ಕೆಲಸದ ದಿನಗಳು | 05 – ಕೆಲಸದ ದಿನಗಳು |